**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 804 (838)
ಸದಸ್ಯರ ಹೆಸರು : ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 19.08.2025
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| | ಪ್ರಶ್ನೆ | ಉತ್ತರ |
|---|---|---|
| ಅ) | ಮಹಾನಗರ ಪಾಲಿಕೆಯ ನೌಕರರ ವಿವಿಧ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಮಹಾನಗರ ಪಾಲಿಕೆಯ ನೌಕರರ ಬೇಡಿಕೆಗಳು ಯಾವುವು; (ವಿವರ ನೀಡುವುದು) | ಮಹಾನಗರ ಪಾಲಿಕೆಯ ನೌಕರರುಗಳ ಸರ್ಕಾರಕ್ಕೆ ಸಲ್ಲಿಸಿರುವ ಬೇಡಿಕೆಗಳ ವಿವರಗಳನ್ನು **ಅನುಬಂಧದಲ್ಲಿ ನೀಡಿದೆ.** |
| ಇ) | ನೌಕರರ ಯಾವ ಬೇಡಿಕೆಗಳನ್ನು ಇದುವರೆಗೆ ಈಡೇರಿಸಲಾಗಿದೆ; (ವಿವರ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳ ಅಧಿಕಾರಿ/ ನೌಕರರ ಬೇಡಿಕೆಗಳ ಕುರಿತಂತೆ ದಿನಾಂಕ: 15.07.2025ರಂದು ಸಂಘಧ ಪದಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಗಿರುತ್ತದೆ.<br><br>ಪಾಲಿಕೆಯ ಅಧಿಕಾರಿ / ನೌಕರರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಅಂಶವನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ಸದರಿ ನೌಕರರುಗಳ ಬೇಡಿಕೆಗಳಿಗೆ ತಗಲುವ ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದು ಹಾಗೂ ತಗಲುವ ವೆಚ್ಚ ಎಷ್ಟಾಗುತ್ತದೆಂಬ ಅಂಕಿ ಅಂಶಗಳೊಂದಿಗೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸರ್ಕಾರದ ದಿನಾಂಕ:30.07.2025ರ ಪತ್ರದಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರನ್ನು ಕೋರಲಾಗಿರುತ್ತದೆ.<br><br>ಅದರಂತೆ, ಪೌರಾಡಳಿತ ನಿರ್ದೇಶನಾಲಯದಿಂದ ಸರ್ಕಾರದಿಂದ ಕೋರಲಾದ ಮಾಹಿತಿಯನ್ನು ಒದಗಿಸಲು ದಿನಾಂಕ:04.08.2025ರ ಪತ್ರದಲ್ಲಿ ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರುಗಳಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಸೂಚಿಸಲಾಗಿರುತ್ತದೆ.<br><br>**ಮಹಾನಗರಪಾಲಿಕೆಗಳ ಅಧಿಕಾರಿ / ನೌಕರರ ಬೇಡಿಕೆಗಳ ಪೈಕಿ:**<br>• ವೈದ್ಯಕೀಯ ವೆಚ್ಚದ ಬಿಲ್ಲುಗಳ ಮೊತ್ತವನ್ನು ರೂ.1,00,000- (ಒಂದು ಲಕ್ಷ) ದಿಂದ ರೂ.2,00,000/- (ಎರಡು ಲಕ್ಷಗಳ) ವರೆಗಿನ ಮೊತ್ತವನ್ನು ಮರುಪಾವತಿಸುವ ಅಧಿಕಾರವನ್ನು ಮಹಾನಗರಪಾಲಿಕೆಗಳ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಲು ಸರ್ಕಾರದ ಅನುಮೋದನೆಗಾಗಿ ಏಕ ಕಡತದಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ: **08.08.2025** ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| | | • ಮಹಾನಗರಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ/ಗುತ್ತಿಗೆ/ದಿನಗೂಲಿ/ ಕ್ಷೇಮಾಭಿವೃದ್ಧಿ /ಸಮಾನ ಕೆಲಸಕ್ಕೆ ಸಮಾನ ವೇತನದಡಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳನ್ನು ನೇರಪಾವತಿ/ ಖಾಯಂಗೊಳಿಸಿದಲ್ಲಿ ತಗುಲಬಹುದಾದ ಮಾಸಿಕ ಮತ್ತು ವಾರ್ಷಿಕ ವೆಚ್ಚದ ಕುರಿತು ಲೆಕ್ಕಾಚಾರ ಮಾಡಿ ಸದರಿ ನೌಕರರುಗಳ ಅಂಕಿ ಅಂಶಗಳ ವಿವರಗಳಂತೆ ವಿವಿಧ ವೃಂದದ ನೌಕರರುಗಳಿಗೆ ತಗುಲುವ ಮಾಸಿಕ ಮತ್ತು ವಾರ್ಷಿಕವಾಗಿ ಆರ್ಥಿಕ ವೆಚ್ಚವಾಗುವ ಅಂದಾಜಿನ ತಃಖ್ತೆಗಳನ್ನು ಸರ್ಕಾರಕ್ಕೆ ದಿನಾಂಕ:04.08.2025ರಂದು ಸಲ್ಲಿಸಿ, ಆರ್ಥಿಕ ಇಲಾಖೆಯ ಸಹಮತಿ ದೊರಕಿಸಿಕೊಡಲು ಕೋರಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಈ) | ಯಾವ ಕಾಲಮಿತಿಯಲ್ಲಿ ನೌಕರರ ಬೇಡಿಕೆಗಳನ್ನು ಈಡೇರಿಸಲಾಗುವುದು? | ಎಲ್ಲಾ ಮಹಾನಗರ ಪಾಲಿಕೆಗಳಿಂದ ಮಾಹಿತಿ / ಪ್ರಸ್ತಾವನೆಗಳು ಸ್ವೀಕೃತವಾದ ನಂತರ ಉಳಿದ ಬೇಡಿಕೆಗಳ ಕುರಿತು ಪರಿಶೀಲಿಸಲಾಗುವುದು. |

**ಸಂಖ್ಯೆ: ನಅಇ 249 ಎಂಎನ್‌ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

ಅನುಬಂಧ

6/20

ನೋಂ.ಸಂ.: ಎಸ್.ಓ.ಆರ್.-ಜಿ.ಎನ್.ಆರ್. 85/2007-08
ನೋಂ ಸಂ : ಡಿ ಆರ್ ಡಿ ವಿ /ಎಸ್ ಓ ಆರ್ /110/2019-2020

# ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ

ಕೇಂದ್ರ ಕಛೇರಿ ದಾವಣಗೆರೆ ಮಹಾನಗರ ಪಾಲಿಕೆ ಆವರಣ, ಪಿ.ಬಿ. ರಸ್ತೆ, ದಾವಣಗೆರೆ-577 002.

| ಗೌರವ ಅಧ್ಯಕ್ಷರು : | ರಾಜ್ಯಾಧ್ಯಕ್ಷರು | ರಾಜ್ಯ ಉಪಾಧ್ಯಕ್ಷರು : | ರಾಜ್ಯ ಪ್ರಧಾನ ಕಾರ್ಯದರ್ಶಿ : |
|---|---|---|---|
| **ಎಸ್.ಹೆಚ್. ಗುರುಮೂರ್ತಿ** | **ಎ. ಅಮೃತ್‌ರಾಜ್** | **ಬಿ. ವೆಂಕಟರಾಮ್** | **ಟಿ.ಸಿ. ಬಸವರಾಜಯ್ಯ** |
| ಮಹಾನಗರ ಪಾಲಿಕೆ, ದಾವಣಗೆರೆ | ಬೃ.ಬೆಂ.ಮ.ಪಾಲಿಕೆ, ಬೆಂಗಳೂರು | ಮಹಾನಗರ ಪಾಲಿಕೆ ಮೈಸೂರು | ಮಹಾನಗರ ಪಾಲಿಕೆ, ದಾವಣಗೆರೆ |
| ಮೊ.: 9986179134 | ಮೊ.: 9980138530 | ಮೊ.: 9449076225 | ಮೊ.: 9448442697 |


ಕ್ರಮ ಸಂಖ್ಯೆ : ದಿನಾಂಕ : 11.07.2025

ADC

ರವರಿಗೆ,
ಸರ್ಕಾರದ ಮಾನ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಕರ್ನಾಟಕ ಸರ್ಕಾರ,
ವಿಕಾಸಸೌಧ ,ಬೆಂಗಳೂರು

Directorate of Municipal Admin
No
Compilation
22 JUL 2025
HQA/ AD. Admin
DMA

E-1049627

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಿ ಕೊಡುವಂತೆ ಕೋರಿ.

******

ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕರ್ನಾಟಕ ರಾಜ್ಯದ 10 ಮಹಾನಗರ ಪಾಲಿಕೆಗಳ ಅಧಿಕಾರಿ/ನೌಕರರ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸರ್ಕಾರಕ್ಕೆ ಈಗಾಗಲೇ ಹಲವಾರು ಮನವಿ ಪತ್ರಗಳನ್ನು ಸಲ್ಲಿಸಿದ್ದರು ಸಹ, ಸರ್ಕಾರ ಸಕರಾತ್ಮಕವಾಗಿ ಸ್ಪಂಧಿಸದ ಕಾರಣ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ (ರಿ), ವತಿಯಿಂದ ರಾಜ್ಯದ ಮಹಾನಗರ ಪಾಲಿಕೆಗಳ ಎಲ್ಲಾ ಅಧಿಕಾರಿ/ನೌಕರರುಗಳು ಕಚೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸುವ ಮೂಲಕ ಸಾಮೂಹಿಕ ರಜೆ ಹಾಕಿ ದಿನಾಂಕ: 08-07-2025 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆದರೆ, ಸದರಿ ಪ್ರತಿಭಟನೆಗೆ ಸರ್ಕಾರದ ಪರವಾಗಿ ಯಾವುದೇ ಪ್ರತಿನಿಧಿಗಳಾಗಲಿ/ಅಧಿಕಾರಿಗಳಾಗಲಿ ಸ್ಪಂದಿಸಿರುವುದಿಲ್ಲ. ಆದಕಾರಣ ಆಯಾ ಮಹಾನಗರ ಪಾಲಿಕೆಗಳ ಕೇಂದ್ರ ಕಚೇರಿಗಳ ಮುಂದೆ ದಿನಾಂಕ : 09.07.2025 ರಿಂದ ಅನಿರ್ಧಿಷ್ಟಾವದಿವರೆಗೆ ಪ್ರತಿಭಟನೆ ಮುಂದುವರೆಸಿರುತ್ತೇವೆ. ಆದ ಕಾರಣ ತಾವು ಈ ಕೆಳಕಂಡ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ ಕೊಡುವಂತೆ ತಮ್ಮಲ್ಲಿ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ.

Meeting. Municipal Admin

**ರಾಜ್ಯದ ಮಹಾನಗರ ಪಾಲಿಕೆಗಳ ಅಧಿಕಾರಿ/ನೌಕರರ ಪ್ರಮುಖ ಬೇಡಿಕೆಗಳು**

1. 7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿಸಿರುವಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಅಧಿಕಾರಿ/ ನೌಕರರಿಗೆ ಯಥಾವತ್ತಾಗಿ ವಿಸ್ತರಿಸಿ ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ರಾಜ್ಯ ಹಣಕಾಸು ಆಯೋಗ ನೀಡುವ ವೇತನ ಅನುದಾನದಿಂದಲೇ ಶೇಕಡ 100 ರಷ್ಟು ಅನುದಾನವನ್ನು ಬಿಡುಗಡೆ ಮಾಡಲು ಸಂಬಂಧಪಟ್ಟವರಿಗೆ ಸೂಚಿಸಲು ಕೋರಿದೆ.

JDA

2. ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳು (ಅಧಿಕಾರಿ ಮತ್ತು ಸಿಬ್ಬಂದಿಗಳ) ಸಾಮಾನ್ಯ ನೇಮಕಾತಿ ನಿಯಮಗಳು 2011ಕ್ಕೆ ಸಮಗ್ರ ತಿದ್ದುಪಡಿ ಮಾಡಿ ಶೀಘ್ರವಾಗಿ ಕರಡು ಅಧಿಸೂಚನೆಯನ್ನು ಪ್ರಕಟಿಸುವುದು. ಕರಡು ಅಧಿಸೂಚನೆ ಪ್ರಕಟಣೆ ಹೊರಡಿಸುವವರೆಗೂ ಮಹಾನಗರ ಪಾಲಿಕೆಗಳಲ್ಲಿನ ಮುಖ್ಯಾಧಿಕಾರಿ ಶ್ರೇಣಿ-1ರ ಸಮಾನಾಂತರ ಹುದ್ದೆಗಳಾದ ಕಚೇರಿ ಸಹಾಯಕ/ಆಸ್ತಿ ಅಧಿಕಾರಿ/ಕಂದಾಯಾಧಿಕಾರಿ ಹಾಗೂ ಪೌರಾಯುಕ್ತರು ಶ್ರೇಣಿ-2ರ ಸಮನಾಂತರ ಹುದ್ದೆಗಳಾದ ವಲಯ ಆಯುಕ್ತರು/ಕೌನ್ಸಿಲ್ ಕಾರ್ಯದರ್ಶಿ/ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಗಳಿಗೆ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಂದ ಮುಂಬಡ್ತಿ ಹೊಂದಿರುವ ಯಾವುದೇ ಅಧಿಕಾರಿ/ನೌಕರರನ್ನು ನಿಯೋಜನೆ ಮಾಡುವುದನ್ನು ತಡೆಹಿಡಿಯಲು ಸಂಬಂಧಪಟ್ಟವರಿಗೆ ಸೂಚಿಸಲು ಕೋರಿದೆ.

ನೋಂ.ಸಂ.: ಎಸ್.ಓ.ಆರ್.-ಜಿ.ಎನ್.ಆರ್. 85/2007-08
ನೋಂ.ಸಂ.: ಡಿ.ಆರ್.ಡಿ.ವಿ./ಎಸ್.ಓ.ಆರ್./110/2019-2020

# ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ

ಕೇಂದ್ರ ಕಛೇರಿ ದಾವಣಗೆರೆ ಮಹಾನಗರ ಪಾಲಿಕೆ ಆವರಣ, ಪಿ.ಬಿ. ರಸ್ತೆ, ದಾವಣಗೆರೆ-577 002.

ಗೌರವ ಅಧ್ಯಕ್ಷರು : **ಎಸ್.ಹೆಚ್. ಗುರುಮೂರ್ತಿ**, ಮಹಾನಗರ ಪಾಲಿಕೆ, ದಾವಣಗೆರೆ, ಮೊ.: 9986179134

ರಾಜ್ಯಾಧ್ಯಕ್ಷರು **ಎ. ಅಮೃತ್‌ರಾಜ್**, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಮೊ.: 9980138530

ರಾಜ್ಯ ಉಪಾಧ್ಯಕ್ಷರು : **ಬಿ. ವೆಂಕಟರಾಮ್**, ಮಹಾನಗರ ಪಾಲಿಕೆ ಮೈಸೂರು, ಮೊ.: 9449076225

ರಾಜ್ಯ ಪ್ರಧಾನ ಕಾರ್ಯದರ್ಶಿ : **ಟಿ.ಸಿ. ಬಸವರಾಜಯ್ಯ**, ಮಹಾನಗರ ಪಾಲಿಕೆ, ದಾವಣಗೆರೆ, ಮೊ.: 9448442697

ಕ್ರಮ ಸಂಖ್ಯೆ : ದಿನಾಂಕ : 11.07.25

3. ಸುವಿಧಾನದ 73ನೇ ತಿದ್ದುಪಡಿ ಯಆರ್ಟಿಕಲ್ 243ನೇ (A ರಿಂದ O ವರೆಗಿನ) ವಿಧಿಯನ್ವಯ ಗ್ರಾಮೀಣ ಸ್ಥಳೀಯ ಸಂಸ್ಥೆ (ಗ್ರಾಮ ಪಂಚಾತಿಯಿತಿ / ತಾಲ್ಲೂಕು ಪಂಚಾಯಿತಿ / ಜಿಲ್ಲಾ ಪಂಚಾಯಿತಿ) ಗಳು ಸೃಜನೆಗೊಂಡಿರುತ್ತವೆ. ಅದೇ ರೀತಿ ಸಂವಿಧಾನದ 74ನೇ ತಿದ್ದುಪಡಿಯಲ್ಲಿ ಆರ್ಟಿಕಲ್ 243ನೇ (P ರಿಂದ Z ವರೆಗಿನ) ವಿಧಿಯನ್ವಯ ನಗರ ಸ್ಥಳೀಯ ಸಂಸ್ಥೆ (ಮಹಾನಗರ ಪಾಲಿಕೆಗಳು / ನಗರಸಭೆ / ಪುರಸಭೆ /ಪಟ್ಟಣ ಪಂಚಾಯಿತಿ /ಅಧಿಸೂಚಿತ ಪ್ರದೇಶ) ಗಳು ಸೃಜನೆಗೊಂಡಿರುತ್ತವೆ.

ಅ) ಗ್ರಾಮಿಣ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರನು ಪೂರ್ಣ ಪ್ರಮಾಣದ ರಾಜ್ಯ ಸರ್ಕಾರಿ ನೌಕರರಾಗಿ ಪರಿಗಣಿಸಿದ್ದು, ಸರ್ಕಾರದಿಂದ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ಎಲ್ಲಾ ಸೌಲಭ್ಯಗಳನ್ನು ಯಥಾವತ್ತಾಗಿ ಜಾರಿಗೊಳಿಸಲಾಗಿರುತ್ತದೆ.

ಆ) ಆದರೆ, ನಗರ ಸ್ಥಳೀಯ ಸಂಸ್ಥೆ(ULB)ಗಳಲ್ಲಿ ಕರ್ತವ್ಯ ನಿರ್ವಹಿಸುತ್ತರುವ ಅಧಿಕಾರಿ/ನೌಕರರನ್ನು ಅರೆ-ಸರ್ಕಾರಿ ನೌಕರರಾಗಿ ಪರಿಗಣಿಸಿದ್ದು, ಸರ್ಕಾರದಿಂದ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ಎಲ್ಲಾ ಸೌಲಭ್ಯಗಳನ್ನು ಯಥಾವತ್ತಾಗಿ ಜಾರಿಗೊಳಿಸದೇ ಮಲತಾಯಿ ಧೋರಣೆಯನ್ನು ಅನುಸರಿಸಲಾಗಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆ (ULB)ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೂ ಸಹ ಪೂರ್ಣ ಪ್ರಮಾಣದ ರಾಜ್ಯ ಸರ್ಕಾರಿ ನೌಕರರಾಗಿ ಪರಿಗಣಿಸಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ಎಲ್ಲಾ ಸೌಲಭ್ಯಗಳನ್ನು ಯಥಾವತ್ತಾಗಿ ಜಾರಿಗೊಳಿಸಲು ಕೋರಿದೆ.

4. ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವಂತೆ ಕೆ.ಜಿ.ಐ.ಡಿ, ಜಿ.ಐ.ಎಸ್ (ಗ್ರೂಪ್ ಇನ್ಸೂರೆನ್ಸ್) ಹಾಗೂ ಜಿ.ಪಿ.ಎಫ್ ಸೌಲಭ್ಯವನ್ನು ಯಥಾವತ್ತಾಗಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆಗಳ ಅಧಿಕಾರಿ/ನೌಕರರಿಗೆ ಜಾರಿಗೊಳಿಸಲು ಸೂಕ್ತ ಆದೇಶ ಹೊರಡಿಸಲು ಕೋರಿದೆ.

5. ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ ನಗದು ರಹಿತ ಆರೋಗ್ಯ ಸೌಲಭ್ಯವಾದ ಜ್ಯೋತಿ ಸಂಜೀವಿನಿ ಅಥವಾ ಆರೋಗ್ಯ ಸಂಜೀವಿನಿ ಸೌಲಭ್ಯವನ್ನು ಯಥಾವತ್ತಾಗಿ ಕರ್ನಾಟಕ ರಾಜ್ಯ ಎಲ್ಲಾ ಮಹಾನಗರ ಪಾಲಿಕೆಗಳ ಅಧಿಕಾರಿ/ನೌಕರರಿಗೆ ನಗದು ರಹಿತ ಸೌಲಭ್ಯವನ್ನು ವಿಸ್ತರಿಸಿ ಸೂಕ್ತ ಆದೇಶ ಹೊರಡಿಸಲು ಕೋರಿದೆ.

6. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳಿಗೆ ಕೆ.ಎಂ.ಸಿ ಕಾಯ್ದೆ 1976 ನಿಯಮ 83 ರಂತೆ ಕೆ.ಎಂ.ಎ.ಎಸ್ ವೃಂದದ ಹುದ್ದೆಗಳಿಗೆ ಮುಂಬಡ್ತಿ ಪಡೆಯುವ ಅವಕಾಶ ಇರುವುದು ತಿಳಿದಿದ್ದರೂ ಸಹ ಉದ್ದೇಶ ಪೂರ್ವಕವಾಗಿ ಕಳೆದ 50 ವರ್ಷಗಳಿಂದ ಮಹಾನಗರ ಪಾಲಿಕೆ ನೌಕರರಿಗೆ ಕೆ.ಎಂ.ಎ.ಎಸ್ ವೃಂದದ ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಿರುವುದಿಲ್ಲ. ಹಾಗೂ ಮಹಾನಗರ ಪಾಲಿಕೆಗಳಿಗೆ ಮೀಸಲಿರುವ ಕೆ.ಎಂ.ಎ.ಎಸ್ ಹುದ್ದೆಗಳಿಗೆ ಪೌರಸೇವಾ ವೃಂದದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಮುಂಬಡ್ತಿಯನ್ನು ನೀಡಿ ಮಹಾನಗರ ಪಾಲಿಕೆಗಳಿಗೆ ನಿಯೋಜಿಸುತ್ತಿರುವುದರಿಂದ ರಾಜ್ಯದ ಮಹಾನಗರ ಪಾಲಿಕೆಗಳ ನೌಕರರಿಗೆ ಕೆ.ಎಂ.ಎ.ಎಸ್ ವೃಂದದ ಹುದ್ದೆಗಳಿಗೆ ಮುಂಬಡ್ತಿ ಪಡೆಯುವ ಅವಕಾಶದಿಂದ ವಂಚಿತರಾಗಿರುತ್ತಾರೆ.

ಕರ್ನಾಟಕ ಪೌರಾಡಳಿತ ಸೇವೆ (ವೃಂದ ಮತ್ತು ನೇಮಕಾತಿ) ನಿಮಯಗಳು-2022 ರಲ್ಲಿ ಮಹಾನಗರ ಪಾಲಿಕೆಗಳ ನೌಕರರಿಗೆ ಕೆ.ಎಂ.ಎ.ಎಸ್ ಮುಖ್ಯಾಧಿಕಾರಿ ಶ್ರೇಣಿ-1ರ ಹುದ್ದೆಗೆ ಮುಂಬಡ್ತಿಯ ಅವಕಾಶ ಕಲ್ಪಿಸಲಾಗಿದ್ದರೂ ಸಹ ಸದರಿ ಹುದ್ದೆಯಲ್ಲಿ ಮಹಾನಗರ ಪಾಲಿಕೆಗಳ ಕಚೇರಿ ಸಹಾಯಕರಿಗೆ ಅವೈಜ್ಞಾನಿಕವಾಗಿ ಅವಕಾಶ ಕಲ್ಪಿಸಿರುವುದನ್ನು ಈ ಕೆಳಕಂಡಂತೆ ವಿವರಿಸಿದೆ.

ನೋಂ.ಸಂ.: ಎಸ್.ಓ.ಆರ್.-ಜಿ.ಎನ್.ಆರ್. 85/2007-08
ನೋಂ.ಸಂ.: ಡಿ.ಆರ್.ಡಿ.ವಿ./ಎಸ್.ಓ.ಆರ್./110/2019-2020

# ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ

ಕೇಂದ್ರ ಕಛೇರಿ ದಾವಣಗೆರೆ ಮಹಾನಗರ ಪಾಲಿಕೆ ಆವರಣ, ಪಿ.ಬಿ. ರಸ್ತೆ, ದಾವಣಗೆರೆ-577 002.

| ಗೌರವ ಅಧ್ಯಕ್ಷರು : | ರಾಜ್ಯಾಧ್ಯಕ್ಷರು | ರಾಜ್ಯ ಉಪಾಧ್ಯಕ್ಷರು : | ರಾಜ್ಯ ಪ್ರಧಾನ ಕಾರ್ಯದರ್ಶಿ : |
|---|---|---|---|
| **ಎಸ್.ಹೆಚ್. ಗುರುಮೂರ್ತಿ** | **ಎ. ಅಮೃತ್‌ರಾಜ್** | **ಬಿ. ವೆಂಕಟರಾಮ್** | **ಬಿ.ಸಿ. ಬಸವರಾಜಯ್ಯ** |
| ಮಹಾನಗರ ಪಾಲಿಕೆ, ದಾವಣಗೆರೆ | ಬೃ.ಬೆಂ.ಮ.ಪಾಲಿಕೆ, ಬೆಂಗಳೂರು | ಮಹಾನಗರ ಪಾಲಿಕೆ ಮೈಸೂರು | ಮಹಾನಗರ ಪಾಲಿಕೆ, ದಾವಣಗೆರೆ |
| ಮೊ.: 9986179134 | ಮೊ.: 9980138530 | ಮೊ.: 9449076225 | ಮೊ.: 9448442697 |


ಕ್ರಮ ಸಂಖ್ಯೆ :

ದಿನಾಂಕ : 11.07.2025

- ಮುಖ್ಯಾಧಿಕಾರಿ ಶ್ರೇಣಿ-1ರ (ವೇತನ ಶ್ರೇಣಿ 65950-124900) ಹುದ್ದೆಗೆ ಮುಂಬಡ್ತಿಯನ್ನು ಪೌರ ಸೇವಾ ವೃಂದದಗ್ರೂಪ್"ಸಿ" ಹುದ್ದೆಯ ಕಚೇರಿ ವ್ಯವಸ್ಥಾಪಕರು ಮತ್ತು ಕಂದಾಯಾಧಿಕಾರಿ ಮತ್ತು ಪೌರಾಡಳಿತ ನಿರ್ದೇಶನಾಲಯದ ಕಚೇರಿ ವ್ಯವಸ್ಥಾಪಕರಿಗೆ (ವೇತನ ಶ್ರೇಣಿ 61300-112900) ರವರಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ "ಬಿ" ಹುದ್ದೆಯ ಮತ್ತು ಉನ್ನತ ವೇತನ ಶ್ರೇಣಿಯ ಕಚೇರಿ ಸಹಾಯಕರ (ವೇತನ ಶ್ರೇಣಿ 69250-134200) ರವರಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವುದು ಸರ್ಕಾರದ ಉಪ ಕಾರ್ಯದರ್ಶಿಗಳು-2. ಸಿಆಸುಇ (ಸೇವಾ ನಿಯಮಗಳು) ರವರ ಸುತ್ತೋಲೆ ಸಂಖ್ಯೆ ಸಿಆಸುಇ 17 ಸೇನಿಡಿ 2020, ದಿ: 06.07.2000 ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ ಹಾಗೂ ಅವೈಜ್ಞಾನಿಕವಾಗಿದ್ದು, ಮಹಾನಗರ ಪಾಲಿಕೆಗಳ ಅಧಿಕಾರಿಗಳಿಗೆ ಉದ್ದೇಶ ಪೂರ್ವಕವಾಗಿ ಅನ್ಯಾಯ ಮಾಡಲಾಗಿರುತ್ತದೆ.
- ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿ ಸಹಾಯಕರ (ವೇತನ ಶ್ರೇಣಿ 69250-134200) ರವರಿಗೆ ಕೆ.ಎ.ಎಂ.ಎಸ್ ಮುಖ್ಯಾಧಿಕಾರಿ ಶ್ರೇಣಿ-1ರ (ವೇತನ ಶ್ರೇಣಿ 65950-124900) ಹುದ್ದೆಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವುದು ಅವೈಜ್ಞಾನಿಕವಾಗಿರುವುದರಿಂದ ಸದರಿ ಕಚೇರಿ ಸಹಾಯಕರುಗಳಿಗೆ ಒಂದು ಬಾರಿಗೆ ಕೆ.ಎಂ.ಎ.ಎಸ್ ಪೌರಾಯುಕ್ತರು ಶ್ರೇಣಿ-2ಕ್ಕೆ ಮುಂಬಡ್ತಿಗೆ ಅವಕಾಶ ಕಲ್ಪಿಸುವುದು.
- ಪೌರಸೇವಾ ವೃಂದದ ಗ್ರೂಪ್ "ಸಿ" ಹುದ್ದೆಯ ಕಚೇರಿ ವ್ಯವಸ್ಥಾಪಕರು ಮತ್ತು ಕಂದಾಯಾಧಿಕಾರಿ ಮತ್ತು ಪೌರಾಡಳಿತ ನಿರ್ದೇಶನಾಲಯದ ಕಚೇರಿ ವ್ಯವಸ್ಥಾಪಕರಿಗೆ (ವೇತನ ಶ್ರೇಣಿ 61300-112900) ರವರಿಗೆ ಮುಖ್ಯಾಧಿಕಾರಿ ಶ್ರೇಣಿ-1ರ (ವೇತನ ಶ್ರೇಣಿ 65950-124900) ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವಂತೆ, ರಾಜ್ಯ ಮಹಾನಗರ ಪಾಲಿಕೆಗಳಲ್ಲಿನ ಗ್ರೂಪ್ "ಸಿ" ಹುದ್ದೆಯ ಕಚೇರಿ ವ್ಯವಸ್ಥಾಪಕರು ಮತ್ತು ಸಹಾಯಕ ಕಂದಾಯಾಧಿಕಾರಿ (ವೇತನ ಶ್ರೇಣಿ 61300-112900) ರವರಿಗೂ ಸಹ ಕೆ.ಎಂ.ಎ.ಎಸ್ ಮುಖ್ಯಾಧಿಕಾರಿ ಶ್ರೇಣಿ-1ರ ಹುದ್ದೆಗೆ ಮುಂಬಡ್ತಿಯ ಅವಕಾಶ ಕಲ್ಪಿಸುವುದು.
- ಪೌರ ಸೇವಾ ವೃಂದದ ಹಿರಿಯ ಆರೋಗ್ಯ ನಿರೀಕ್ಷಕರು (ವೇತನ ಶ್ರೇಣಿ 49050-92500) ರವರಿಗೆ ಮುಖ್ಯಾಧಿಕಾರಿ ಶ್ರೇಣಿ-2ರ (ವೇತನ ಶ್ರೇಣಿ 54175-99400) ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವಂತೆ, ರಾಜ್ಯ ಮಹಾನಗರ ಪಾಲಿಕೆಗಳಲ್ಲಿನ ಹಿರಿಯ ಆರೋಗ್ಯ ನಿರೀಕ್ಷಕರು (ವೇತನ ಶ್ರೇಣಿ 49050-92500) ರವರಿಗೂ ಸಹ ಕೆ.ಎಂ.ಎ.ಎಸ್ ಮುಖ್ಯಾಧಿಕಾರಿ ಶ್ರೇಣಿ-2ರ ಹುದ್ದೆಗೆ ಮುಂಬಡ್ತಿಯ ಅವಕಾಶ ಕಲ್ಪಿಸುವುದು.

ಆದುದರಿಂದ ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಸೂಕ್ತ ಅನುಪಾತ ನಿಗಧಿಪಡಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಲು ಕೋರಿದೆ.

7. ಕನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿ ವರ್ಷ ಆಯೋಜಿಸಿರುವ ಕ್ರೀಡೆಯನ್ನು ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೂ ಆಯೋಜಿಸಬೇಕು.

| ಗೌರವ ಅಧ್ಯಕ್ಷರು : | ರಾಜ್ಯಾಧ್ಯಕ್ಷರು | ರಾಜ್ಯ ಉಪಾಧ್ಯಕ್ಷರು : | ರಾಜ್ಯ ಪ್ರಧಾನ ಕಾರ್ಯದರ್ಶಿ : |
|---|---|---|---|
| **ಎಸ್.ಹೆಚ್. ಗುರುಮೂರ್ತಿ** | **ಎ. ಅಮೃತ್‌ರಾಜ್** | **ಬಿ. ವೆಂಕಟರಾಮ್** | **ಟಿ.ಸಿ. ಬಸವರಾಜಯ್ಯ** |
| ಮಹಾನಗರ ಪಾಲಿಕೆ, ದಾವಣಗೆರೆ | ಬೃ.ಬೆಂ.ಮ.ಪಾಲಿಕೆ, ಬೆಂಗಳೂರು | ಮಹಾನಗರ ಪಾಲಿಕೆ ಮೈಸೂರು | ಮಹಾನಗರ ಪಾಲಿಕೆ, ದಾವಣಗೆರೆ |
| ಮೊ.: 9986179134 | ಮೊ.: 9980138530 | ಮೊ.: 9449076225 | ಮೊ.: 9448442697 |


ಕ್ರಮ ಸಂಖ್ಯೆ :

ದಿನಾಂಕ : 11-07-2025

8. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಆಡಳಿತ ನಿರ್ವಹಣೆಯನ್ನು ಪೌರಾಡಳಿತ ನಿರ್ದೇಶನಾಲಯದಿಂದ ಬೇರ್ಪಡಿಸಿ ಪ್ರತ್ಯೇಕವಾದ **"ಆಯುಕ್ತಾಲಯ"** (Commissionerate) ಅನ್ನು ರಚಿಸುವುದು. ಅಲ್ಲಿಯವರೆಗೆ ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಗಳ ವಿಭಾಗಕ್ಕೆ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಂದ ನಿಯೋಜಿತರಾಗಿರುವ / ಮುಂಬಡ್ತಿ ಹೊಂದಿರುವ ಅಧಿಕಾರಿ / ನೌಕರರನ್ನು ನಿಯೋಜನೆ ಮಾಡದಿರಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

9. 2011 ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರತಿಯೊಂದು ಪಾಲಿಕೆಗೆ "ಪಾಲಿಕೆ ಆರೋಗ್ಯಾಧಿಕಾರಿ" ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಕಾರ್ಯಪಾಲಕ ಅಭಿಯಂತರರು(ಪರಿಸರ) ಹುದ್ದೆಯಾಗಿ ಮರುನಾಮಿಕರಿಸಲಾಗುತ್ತಿದ್ದು, (Re-Designated) ಪ್ರತಿಯೊಂದು ಪಾಲಿಕೆಗೂ ಒಂದರಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಗೂ ಕಾರ್ಯಪಾಲಕ ಅಭಿಯಂತರರು(ಪರಿಸರ) ಹುದ್ದೆಗಳನ್ನು ಮರುನಾಮಿಕರಿಸಲು ಕೋರಿದೆ. ಈ ರೀತಿ ಪದನಾಮ ಮರುನಾಮಿಕರಿಸುವುದರಿಂದ ಸರ್ಕಾರಕ್ಕೆ ಯಾವುದೇ ರೀತಿ ಆರ್ಥಿಕ ಹೊರೆ ಆಗುವುದಿಲ್ಲ, ಈಗಾಗಲೇ ಮಹಾನಗರ ಪಾಲಿಕೆಗಳಿಗೆ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ಹುದ್ದೆಗಳನ್ನು ಸೃಜಿಸಿರುವಂತೆ, ಎಲ್ಲಾ ಪಾಲಿಕೆಗಳಿಗೂ ಸಹ ಕಾರ್ಯಪಾಲಕ ಅಭಿಯಂತರರು (ಪರಿಸರ) ಹುದ್ದೆಗಳಾಗಿ ಮರುನಾಮಿಕರಿಸಲು ಕೋರಿದೆ.

* 10. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯಡಿ ಕರ್ತವ್ಯ ನಿರ್ವಹಿಸುತ್ತಿರುವಂತಹ ಎಲ್ಲಾ ಒಳಚರಂಡಿ ಕಾರ್ಮಿಕರು/ವಾಹನ ಚಾಲಕರು/ಕ್ಲೀನರ್/ಲೋಡರ್‌ಗಳ ಸಮಸ್ಯೆಗಳನ್ನು ಸರ್ಕಾರ ತುರ್ತಾಗಿ ಪರಿಗಣಿಸುವ ಸಲುವಾಗಿ ಗುತ್ತಿಗೆ ಪದ್ಧತಿ ರದ್ದುಪಡಿಸಿ, ಸದರಿ ನೌಕರರನ್ನು ನೇರಪಾವತಿಗೆ ಒಳಪಡಿಸಲು ಕೋರಲಾಗಿದೆ.

ಗೌರವ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು

| ಟಿ.ಸಿ. ಬಸವರಾಜಯ್ಯ | **ಬಿ.ವೆಂಕಟರಾಮ್** | ಎ.ಅಮೃತ್‌ರಾಜ್ |
|---|---|---|
| ರಾಜ್ಯ ಪ್ರಧಾನ ಕಾರ್ಯದರ್ಶಿ | ರಾಜ್ಯ ಉಪಾಧ್ಯಕ್ಷರು | ರಾಜ್ಯಾಧ್ಯಕ್ಷರು |

# ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು (ರಿ.)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿ ಆವರಣ, ಎನ್.ಆರ್.ವೃತ್ತ, ಬೆಂಗಳೂರು

## ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ/ಮುಷ್ಕರ

ದಿನಾಂಕ : 08-07-2025, ಮಂಗಳವಾರದಿಂದ

ಕರ್ನಾಟಕ ರಾಜ್ಯದ 10 ಮಹಾನಗರ ಪಾಲಿಕೆಯ ಅಧಿಕಾರಿ/ ನೌಕರರ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸರ್ಕಾರಕ್ಕೆ ಈಗಾಗಲೇ ಹಲವಾರು ಮನವಿ ಪತ್ರಗಳನ್ನು ಸಲ್ಲಿಸಿದ್ದರು ಸಹ, ಸಕರಾತ್ಮಕವಾಗಿ ಸ್ಪಂದಿಸದ ಕಾರಣ ರಾಜ್ಯ ಪರಿಷತ್ ವತಿಯಿಂದ ದಿನಾಂಕ: 08-07-2025 ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಎಲ್ಲಾ ಮಹಾನಗರ ಪಾಲಿಕೆಯ ಅಧಿಕಾರಿ/ ನೌಕರರು ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸುವ ಮೂಲಕ ಸಾಮೂಹಿಕ ರಜೆ ಹಾಕಿ ಅನಿರ್ದಿಷ್ಟಾವಧಿ ಪ್ರತಿಭಟನೆ /ಮುಷ್ಕರ ಹಮ್ಮಿಕೊಳ್ಳಲಾಗಿದೆ.

### ಪ್ರಮುಖ ಬೇಡಿಕೆಗಳು

- 7 ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿಸಿರುವಂತೆ ಮಹಾನಗರ ಪಾಲಿಕೆ ಅಧಿಕಾರಿ ನೌಕರರಿಗೆ ಯಥಾವತ್ತಾಗಿ ವಿಸ್ತರಿಸಿ, ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ರಾಜ್ಯ ಹಣಕಾಸು ಆಯೋಗ ನೀಡುವ ವೇತನದ ಅನುದಾನದಿಂದಲೇ ಶೇಕಡ 100 ರಷ್ಟು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.
- ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ) ಸಾಮಾನ್ಯ ನೇಮಕಾತಿ ನಿಯಮಗಳು 2011 ಕ್ಕೆ ಸಮಗ್ರ ತಿದ್ದುಪಡಿ ಮಾಡಿ ಶೀಘ್ರವಾಗಿ ಕರಡು ಅಧಿಸೂಚನೆಯನ್ನು ಪ್ರಕಟಿಸುವ ಬಗ್ಗೆ.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವಂತೆ ಕೆ.ಜಿ.ಐ.ಡಿ, ಜಿ.ಐ.ಎಸ್ (ಗ್ರೂಪ್ ಇನ್ಸೂರೆನ್ಸ್) ಹಾಗೂ ಜಿ.ಪಿ.ಎಫ್ ಸೌಲಭ್ಯವನ್ನು ಯಥಾವತ್ತಾಗಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ಜಾರಿಗೊಳಿಸುವ ಬಗ್ಗೆ.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ ಜ್ಯೋತಿ ಸಂಜೀವಿನಿ ಯೋಜನೆಯನ್ನು ಯಥಾವತ್ತಾಗಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ನಗದು ರಹಿತ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.
- ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರು ಸುಮಾರು ವರ್ಷಗಳಿಂದ ವಿವಿಧ ವೃಂದದ ಹುದ್ದೆಗಳಿಗೆ ಮುಂಬಡ್ತಿ ಪಡೆಯಲು ವಂಚಿತರಾಗಿರುವುದರಿಂದ ಕೂಡಲೇ ವೃಂದವಾರು ಮುಂಬಡ್ತಿ ನೀಡಲು ಅಗತ್ಯ ಕ್ರಮ ವಹಿಸುವ ಬಗ್ಗೆ.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿ ವರ್ಷ ಆಯೋಜಿಸುವ ಕ್ರೀಡೆಯನ್ನು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ಆಯೋಜಿಸುವ ಬಗ್ಗೆ.
- ರಾಜ್ಯದ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಕೆ.ಎಂ.ಸಿ ಆಕ್ಟ್ 1976 ಸೆಕ್ಷನ್ 83 ರಂತೆ ಹಾಗೂ ಕೆ.ಎಂ.ಎ.ಎಸ್ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೆ.ಎಂ.ಎ.ಎಸ್ ಹುದ್ದೆಗೆ ಮುಂಬಡ್ತಿ ನೀಡಲು ಅವಕಾಶವಿದ್ದರೂ ಸಹ ಕಳೆದ 50 ವರ್ಷಗಳಿಂದಲೂ ಕೆ.ಎಂ.ಎ.ಎಸ್ ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದಿಲ್ಲ. ಈ ಸಂಬಂಧ ರಾಜ್ಯ ಉಚ್ಚನ್ಯಾಯಾಲಯವು ತೀರ್ಪು ನೀಡಲಾಗಿದ್ದರೂ ಸಹ 2022 ರ ಕೆ.ಎಂ.ಎ.ಎಸ್ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ತಾರತಮ್ಯ ಉಂಟುಮಾಡಿರುವುದನ್ನು ಸರಿಪಡಿಸಲು ಕೋರಿ.

ತಮ್ಮ ವಿಶ್ವಾಸಿ

ಎ. ಅಮೃತ್‌ರಾಜ್
ರಾಜ್ಯಾಧ್ಯಕ್ಷರು

Scanned with OKEN Scanner

**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿನ ಪ್ರಶ್ನೆ *

ಸಂಖ್ಯೆ:ಕವಿಪ:156ನೇ:ಅ:2025

ವಿಧಾನ ಪರಿಷತ್ತಿನ ಸಚಿವಾಲಯ
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ
ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು–560 001,ದಿನಾಂಕ:01.08.2025.

**ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/**
**ಸರ್ಕಾರದ ಕಾರ್ಯದರ್ಶಿಯವರಿಗೆ,**
**ನಗರಾಭಿವೃದ್ಧಿ ಇಲಾಖೆ.**

**Un Stared**

**ಮಾನ್ಯರೇ,**

ಸಭಾಪತಿಯವರು ಅಂಗೀಕರಿಸಿದ ರೀತ್ಯಾ ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:** 804 (838)

ತಮ್ಮ ನಂಬುಗೆಯ.

**ಸಮೂಹ: II**
**ಉತ್ತರಿಸಬೇಕಾದ ದಿನಾಂಕ:19.08.2025.**

ಕಾರ್ಯದರ್ಶಿಯವರ ಪರವಾಗಿ
ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಸುನೀಲ್‌ಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ಅವರ ಪ್ರಶ್ನೆಯನ್ನು ಕಳುಹಿಸಿಕೊಡಲಾಗಿದೆ.

**ವಿಷಯ: ಬೀಳಗಿ ಮಹಾನಗರ ಪಾಲಿಕೆಯ ನೌಕರರ ವಿವಿಧ ಬೇಡಿಕೆಗಳ ಕುರಿತು.**

**ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–**

(ಅ) ಮಹಾನಗರ ಪಾಲಿಕೆಯ ನೌಕರರ ವಿವಿಧ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಮಹಾನಗರ ಪಾಲಿಕೆಯ ನೌಕರರ ಬೇಡಿಕೆಗಳು ಯಾವುವು; (ವಿವರ ನೀಡುವುದು)

(ಇ) ನೌಕರರ ಯಾವ ಬೇಡಿಕೆಗಳನ್ನು ಇದುವರೆಗೆ ಈಡೇರಿಸಲಾಗಿದೆ; (ವಿವರ ನೀಡುವುದು)

(ಈ) ಯಾವ ಕಾಲಮಿತಿಯಲ್ಲಿ ನೌಕರರ ಬೇಡಿಕೆಗಳನ್ನು ಈಡೇರಿಸಲಾಗುವುದು?

BDR